ಕ್ರಿಮಿನಲ್ ಮಿಸ್. ನಂ **52/21**

ಪಿ.ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ- **22-12-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಎದುರುದಾರರ ಪರ ಶ್ರೀ ಕೆ ವಿ ಬಿ ವಕೀಲರಿಂದ-

ನಿಪಿ-19 ರಸೀದಿಗಳನ್ನು ಯಾರು ಕೊಟ್ಟರು ಎಂದರೆ ಸಾಕ್ಷಿ ಅರುಣ ಫಾರ್ಮರವರೇ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರಸೀದಿಗಳಿಗೆ ಪೂರಕವಾದ ವೈದ್ಯರ ಪ್ರಿಸ್ಕ್ರಿಂಪಷನ್ ನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಈ ದಾಖಲೆಗಳು ನನ್ನ ಬಳಿ ಇವೆ, ಅದನ್ನು ಹಾಜರುಪಡಿಸಬಲ್ಲೆ ಎಂದು ನುಡಿಯುತ್ತಾರೆ. ಅರುಣ ಫಾರ್ಮರವರಿಗೆ ದುಡ್ಡುಕೊಟ್ಟು ನಾನೇ ಸುಳ್ಳಾಗಿ ನಿಪಿ-19 ರಸೀದಿಗಳನ್ನು ಅವರಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯರ ಬಳಿ ಯಾವುದೇ ಚಿಕಿತ್ಸೆಯನ್ನು ಪಡೆಯದೇ ಇದ್ದರೂ ನಾನು ಎದುರುದಾರರಿಂದ ಸುಳ್ಳಾಗಿ ಹಣ ಪಡೆಯುವ ಉದ್ದೇಶದಿಂದ ರಸೀದಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವ ಖಾಯಿಲೆಯಿಂದ ಬಳಲುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರ ಸಾಕ್ಷಿ ಎದುರುದಾರರು ನೀಡುತ್ತಿದ್ದ ಕಿರುಕುಳಕ್ಕೆ ನಾನು ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದೆ, ಹಾಗೂ ನನಗೆ ಮೈಗ್ರೇನ್ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರ ಸಂ.1 ರವರು ಮಕ್ಕಳ ಶಾಲೆಯ ಎಲ್ಲಾ ಖರ್ಚುಗಳನ್ನು ನೋಡಿಕೊಂಡಿದ್ದರುೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಇತ್ತೀಚೆಗಷ್ಟೆ ಎದುರುದಾರ ಸಂ.1 ಮಕ್ಕಳ ಶಾಲೆಯ ಖರ್ಚು ಪಾವತಿ ಮಾಡಿದ್ದಾರೆ, ಅದಕ್ಕೂ ಮೊದಲು ನಾನೇ ನೋಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು, ಎರಡು ತಿಂಗಳ ಹಿಂದೆ ಎದುರುದಾರ ಸಂ.1 ನನಗೆ ಕೊಡಬೇಕಾದ ಬಾಕಿ ಜೀವನಾಂಶ ಮೊತ್ತವನ್ನು ಮಕ್ಕಳ ಶಾಲೆಯ ಖರ್ಚಿಗೆಂದು ಹಾಗೂ ಮಕ್ಕಳನ್ನು ಶಾಲೆಗೆ ದಾಖಲು ಮಾಡುವ ಮೊತ್ತವನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈಗಲೂ ಸಹ ಎದುರುದಾರ ಸಂ.1 ಮಕ್ಕಳ ಎಲ್ಲಾ ಖರ್ಚು ವೆಚ್ಚ ನೋಡಿಕೊಂಡು ಅವರ ಜೊತೆ ಚೆನ್ನಾಗಿ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಅವರು ಮಕ್ಕಳನ್ನು ನೋಡಿದರೆ ಮಾತನಾಡಿಸುವುದಿಲ್ಲ ಹಾಗೂ ಈ ದಿನ ನನ್ನ ಮಗಳ ಹುಟ್ಟಿದ ಹಬ್ಬ ಇದ್ದರೂ ಸಹ ಅವರು ಅವಳಿಗೆ ವಿಶ್ ಕೂಡ ಮಾಡಿಲ್ಲ ಹಾಗೂ ನಾವು ಕರೆ ಮಾಡಿದರೆ ಅವರು ಫೋನ್ ಎತ್ತುವುದಿಲ್ಲ ಎಂದು ನುಡಿಯುತ್ತಾರೆ. ನಾನು ಎದುರುದಾರ

ಸಂ.1 ರವರ ಜೊತೆ ಸರಿಯಾಗಿ ಜೀವನ ಮಾಡದೇ ಅವರಿಂದ ಹಣ ಪಡೆಯುವ ಉದ್ದೇಶದಿಂದ ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯರ ಬಳಿ ಚಿಕಿತ್ಸೆಗೆಂದು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳಾಗಿ ವೈದ್ಯಕೀಯ ರಸೀದಿಗಳನ್ನು ಸೃಷ್ಟಿಸಿ, ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತವರು ಮನೆ ನನ್ನ ಗಂಡನ ಮನೆಯ ಪಕ್ಕದಲ್ಲಿ ಇತ್ತು ಎಂದರೆ ಸರಿ. ನಾನು ಹೆಚ್ಚಾಗಿ ತವರು ಮನೆಯಲ್ಲಿಯೇ ಇರುತ್ತಿದ್ದೆ ಎಂದರೆ ಸಾಕ್ಷಿ ಎದುರುದಾರರು ನನ್ನ ತಂದೆ ತಾಯಿಯ ಜೊತೆ ನನಗೆ ಮಾತನಾಡಲು ಸಹ ಬಿಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ನ್ಯಾಯಾಲಯದಲ್ಲಿ ಕೆಲಸ ಮಾಡುವುದರಿಂದ ಅದರ ದುರುಪಯೋಗ ಪಡೆದುಕೊಂಡು ಎದುರುದಾರರಿಗೆ ಅವರ ವಿರುದ್ಧ ಕೇಸು ದಾಖಲಿಸುತ್ತೇವೆ ಎಂದು ಹೆದರಿಸುತ್ತಿದ್ದೇವು ಎಂದರೆ ಸರಿಯಲ್ಲ. ನನ್ನ ಅಕ್ಕ ಹೊಸಪೇಟೆಯಲ್ಲಿ ಒಬ್ಬ ವಕೀಲರನ್ನು ಮದುವೆಯಾಗಿದ್ದು, ಅವರು ಈಗ ವಿಚ್ಛೇದನ ಪಡೆದಿರುತ್ತಾರೆ ಎಂದರೆ ಸಾಕ್ಷಿ ಅದನ್ನು ಒಪ್ಪಿ, ಈ ಪ್ರಶ್ನೆ ಈ ಪ್ರಕರಣಕ್ಕೆ ಸಂಬಂಧಪಟ್ಟಿದ್ದಲ್ಲ ಎಂದು ನುಡಿಯುತ್ತಾರೆ. ನನ್ನ ಅಕ್ಕನ ಗಂಡ ನ್ಯಾಯಾಲಯಕ್ಕೆ ಒಮ್ಮೆ ಬಂದಾಗ ನನ್ನ ತಂದೆ ಅವರನ್ನು ಹೆದರಿಸಿದ್ದರು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮದುವೆ ಸಮಯದಲ್ಲಿ ನಾವು ಎದುರುದಾರರಿಗೆ ಯಾವುದೇ ಹಣ ಹಾಗೂ ಬಂಗಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ರೂ.1,10,000/-ಹಣ ಹಾಗೂ ಬಂಗಾರದ ಆಭರಣಗಳನ್ನು ನಾವು ಎದುರುದಾರರಿಗೆ ಕೊಡಬೇಕು ಎಂದು ಮಾತುಕತೆ ಆಗಿತ್ತು ಎಂದು ಸುಳ್ಳು ಮಾಹಿತಿಯನ್ನು ಅರ್ಜಿಯಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಜಂಟಿ ಕುಟುಂಬದಲ್ಲಿ ವಾಸಮಾಡುತ್ತಿದ್ದು, ಎದುರುದಾರ ಸಂ.3 ರವರು ಆಗಾಗ ಬಂದು ಹೋಗುತ್ತಿದ್ದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಎದುರುದಾರ ಸಂ.3 ರವರಿಗೆ ಎದುರುದಾರ ಸಂ.1 ರವರು ಪ್ರತಿ ತಿಂಗಳು ರೂ.10 ಸಾವಿರ ಸಂಬಳ ಕೊಡುತ್ತಿದ್ದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮಾಹಿತಿಗಳನ್ನು ಅರ್ಜಿಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಎದುರುದಾರ ಸಂ.3 ರವರು ನನ್ನ ಗಂಡನ ಮನೆಗೆ ಬಂದು ನನಗೆ ಕಿರುಕುಳ ನೀಡುತ್ತಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅವರು ಈಗಲೂ ಕಿರುಕುಳ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಈಗ ನಿನ್ನ ತವರು ಮನೆ

ಎದುರುದಾರ ಸಂ.1 ರವರ ಮನೆಯಿಂದ ದೂರ ಇದ್ದು, ಈಗಲೂ ಸಹ ಎದುರುದಾರ ಸಂ.3 ರವರು ಬಂದು ಕಿರುಕುಳ ಕೊಡುತ್ತಿದ್ದಾರೆಯೇ ಎಂದರೆ ಸಾಕ್ಷಿ ಅವರು ಕಿರುಕುಳ ಕೊಡುತ್ತಿದ್ದರು ಎಂದು ನಾನು ಹೇಳಲಿಲ್ಲ ಆದರೆ ಈಗಲೂ ಸಹ ಎದುರುದಾರ ಸಂ.1 ರವರ ಮನೆಗೆ ಬಂದು ಹೋಗುವುದು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಎದುರುದಾರ ಸಂ.4 ರವರ ಮೇಲೆ ನನ್ನ ತಂದೆ ಗುಂಡಾ ವ್ಯಕ್ತಿಗಳ ಜೊತೆ ಸೇರಿ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರ ಸಂ.1 ಹಾಗೂ ನನ್ನ ಜೀವನ ಹಾಳಾಗಬಾರದು ಎಂಬ ಉದ್ದೇಶದಿಂದ ಎದುರುದಾರ ಸಂ.4 ರವರು ಈ ಕುರಿತು ಪೊಲೀಸರಿಗೆ ದೂರು ಕೊಟ್ಟಿರಲಿಲ್ಲ ಎಂದರೆ ಸಾಕ್ಷಿ ಹಲ್ಲೆ ಆಗಿಲ್ಲ ಎಂದಾಗ ಯಾವ ಕಾರಣಕ್ಕೆ ದೂರು ಕೊಡುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರ ಸಂ.3 ರವರ ಮಾತು ಕೇಳಿ ಎದುರುದಾರ ಸಂ.2 ಮತ್ತು 4 ರವರು ನನಗೆ ಕಿರುಕುಳ ಕೊಡುತ್ತಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಹೆಣ್ಣು ಮಗು ಆದಾಗ ಎದುರುದಾರರು ನೋಡಲು ಬಂದಿರಲಿಲ್ಲ ಹಾಗೂ ಹೆರಿಗೆ ಖರ್ಚು ಹಾಗೂ ಮಗುವಿನ ಖರ್ಚು ನೋಡಿಕೊಂಡಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಮಗು ಹುಟ್ಟಿ 3 ತಿಂಗಳಾದರೂ ಸಹ ಎದುರುದಾರರು ಅದನ್ನು ನೋಡಲು ಬರುತ್ತಿರಲಿಲ್ಲ, ಹಾಗೂ ನಾನು ಕರೆ ಮಾಡಿದರೆ ಅದನ್ನು ಸ್ವೀಕರಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತವರು ಮನೆ ಗಂಡನ ಮನೆ ಪಕ್ಕಕ್ಕೆ ಇತ್ತು ಎಂದು ನಾನು ಈ ಹಿಂದೆ ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿ. ಅಲ್ಲೇ ಮನೆ ಇದುದ್ದರಿಂದ ನಾನು ಎದುರುದಾರರಿಗೆ ಕರೆ ಮಾಡುವ ಸಂದರ್ಭ ಇರಲಿಲ್ಲ ಎಂದರೆ ಸಾಕ್ಷಿ ನನ್ನ ತವರು ಮನೆ ಹಾಗೂ ಗಂಡನ ಮನೆ ಮಧ್ಯೆ ಒಂದು ಪ್ಲಾಟ್ ಇತ್ತು ಹೀಗಾಗಿ ಈ ಎರಡು ಮನೆಗಳು ಅಕ್ಕ ಪಕ್ಕ ಹೊಂದಿಕೊಂಡಂತೆ ಇರಲಿಲ್ಲ, ನಾನು ಎಷ್ಟು ಬಾರಿ ಕರೆ ಮಾಡಿದರು ಅವರು ನನ್ನ ಕರೆ ಸ್ವೀಕರಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಮಗುವಿನ ನಾಮಕರಣವನ್ನು ವಿಜೃಂಭಣೆಯಿಂದ ದ ಮಾಡಿದರೆ ಮಾತ್ರ ನಾವು ಬರುತ್ತೇವೆ ಎಂದು ಎದುರುದಾರರು ಹೇಳಿದ್ದರು ಎಂದು ನಾನು ಸಾಕ್ಷ್ಯ ನುಡಿದಿರುವುದು ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಒಂದು ತೊಲ ಚೈನು ಕೊಟ್ಟರೆ ಮಾತ್ರ ಬರುತ್ತೇವೆ ಎಂದು ಹೇಳಿದ್ದರು, ಅದನ್ನು ಸಹ ನಾವು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮಗು ಆದ ನಂತರ ಗಂಡನ ಮನೆಗೆ ಹೋಗಿಲ್ಲ, ಹೀಗಾಗಿ ಎದುರುದಾರರು ನನಗೆ ಹೆಣ್ಣು ಮಗು ಆಯಿತು ಎಂದು ಅದನ್ನು ಕೀಳಾಗಿ ನೋಡುತ್ತಿದ್ದರು ಎಂದು

ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಎದುರುದಾರ ಸಂ.4 ಮನೆಯಲ್ಲೇ ಇರುತ್ತಿರಲಿಲ್ಲ, ಹೀಗಾಗಿ ಅವರು ನನಗೆ ಬೈಯುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅವರು ನನಗೆ ದರಿದ್ರ ಎಂದು ಬೈಯುತ್ತಿದ್ದರು ಎಂದು ನುಡಿಯುತ್ತಾರೆ.

ಎರಡು ಮೂರು ಬಾರಿ ಜಮಾತ್ ನಲ್ಲಿ ಪಂಚಾಯಿತಿ ಆಯಿತು ಎಂದು ಹೇಳಿದ್ದು, ಆ ಸಮಯದಲ್ಲಿ ಯಾರೆಲ್ಲಾ ಇದ್ದರು ಎಂದು ಅರ್ಜಿಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ಹೌದು, ಆಗ ಯಾರೆಲ್ಲಾ ಇದ್ದರು ಎಂದು ನನಗೆ ಅಷ್ಟು ನೆನಪಿಲ್ಲ ಎಂದು ನುಡಿಯುತ್ತಾರೆ. ಎದುರುದಾರ ಸಂ.2 ರವರಿಗೆ ವಯಸ್ಸಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಅವರು ಗಟ್ಟಿಯಾಗಿ ಇದ್ದಾರೆ ಎಂದು ನುಡಿಯುತ್ತಾರೆ. ಸದರಿಯವರಿಗೆ ಸ್ಟ್ರೋಕ್ ಆಗಿತ್ತು ಎಂದರೆ ಸಾಕ್ಷಿ ಈ ವಿಷಯ ನನಗೆ ನಮ್ಮ ಪಂಚಾಯಿತಿ ನಡೆಯುವಾಗಲೇ ತಿಳಿಯಿತು ಎಂದು ನುಡಿಯುತ್ತಾರೆ. ಸದರಿಯವರನ್ನು ನೋಡಿಕೊಳ್ಳಲು ಎದುರುದಾರ ಸಂ.1 ಕೆಲಸಗಾರರನ್ನು ಇಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಾನೇ ಅವರಿಗೆ ಸ್ನಾನ ಮಾಡಿಸುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ತವರು ಮನೆ ಗಂಡನ ಮನೆ ಪಕ್ಕ ಇದುದ್ದರಿಂದ ನಾನು ತವರು ಮನೆಯಲ್ಲೇ ಇರುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನನ್ನು ಸಹ ತವರು ಮನೆಗೆ ಕರೆಸಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. 2020 ನೇ ಇಸವಿಯಲ್ಲಿ ನಾನು 2 ನೇ ಬಾರಿ ಗರ್ಭಿಣಿಯಾದಾಗ ಎದುರುದಾರರು ನನ್ನ ಗರ್ಭಪಾತ ಮಾಡಿಸಲು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ವೈದ್ಯರು ಗರ್ಭಪಾತ ಮಾಡುವುದಿಲ್ಲ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಹೀಗೆ ಆಸ್ಪತ್ರೆಯಿಂದ ಬಂದ ನಂತರ ಮರುದಿನ ಎದುರುದಾರರು ನನಗೆ ಊಟ ಕೊಡದೇ ಕಿರುಕುಳ ಕೊಟ್ಟಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನನ್ನನ್ನು 2 ನೇ ತಾರೀಖಿನಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು, 5 ನೇ ತಾರೀಖು ನನ್ನ ಜೊತೆ ಜಗಳ ಮಾಡಿ, ನನಗೆ ಊಟ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಫೈರೋಜ್ ಎನ್ನುವವರನ್ನು ಮನೆಗೆ ಕರೆಸಿ, ಎದುರುದಾರ ಸಂ.1 ರವರಿಗೆ ಇನ್ನೊಂದು ಮದುವೆ ಮಾಡಿಸಲು ಕನ್ಯೆ ನೋಡಲು ಹೇಳಿದ್ದರು ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಈ

ಬಗ್ಗೆ ಅರ್ಜಿಯಲ್ಲಿ ಬರೆಸಿಲ್ಲ. ಸದರಿ ಫೈರೋಜ್ ರವರು ಒಳ್ಳೆಯ ಕನ್ಯೆಯನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿದರು ಎಂದು ನಾನು ಸುಳ್ಳು ಕಥೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನನ್ನು ಎದುರುದಾರ ಸಂ.1 ರವರು ಚಪ್ಪಲಿಯಂತೆ ನೋಡಿಕೊಳ್ಳುತ್ತಾರೆ ಹಾಗೂ ಇನ್ನೊಂದು ಮದುವೆಯಾದ ನಂತರ ಬರುವ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂದು ಫೈರೋಜ್ ರವರು ಹೇಳಿ ಹೋಗಿದ್ದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ದಿಃ **05.05.2020** ರಂದು ಎದುರುದಾರರು ಸೇರಿ ನನ್ನ ಜೊತೆ ಜಗಳ ಮಾಡಿ, ನನ್ನ ಮಾಂಗಲ್ಯ ಸರ ಕಿತ್ತುಕೊಂಡು, ನನ್ನನ್ನು ಮನೆಯಿಂದ ಓಡಿಸಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ದಿನ ನಾನು ಠಾಣೆಗೆ ದೂರು ಕೊಡಲು ಹೋದಾಗ ಪೊಲೀಸರು ಮರುದಿನ ಬರಲು ಹೇಳಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ರಾಜೀ ಪಂಚಾಯಿತಿ ಮಾಡಿಸಿ, ಎದುರುದಾರ ಸಂ.1 ರವರಿಗೆ ಬುದ್ದಿ ಹೇಳಿದ್ದರೂ ಸಹ ಅವರು ಬದಲಾಗಲಿಲ್ಲ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಸಹಿ/-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.